ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, **110** ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ಹೆಣ್ಣೂರು ಮುಖ್ಯರಸ್ತೆಯಿಂದ ರೈಲ್ವೆಹಳಿಯವರೆಗೆ ರಾಜಕಾಲುವೆಯಲ್ಲಿ ಹೂಳನ್ನು ತೆಗೆದಿದ್ದು, ರಾಜಕಾಲುವೆ ಇಂಜಿನಿಯರಿಂಗ್ ವಿಭಾಗದವರಿಗೆ ಧನ್ಯವಾದಗಳನ್ನು ತಿಳಿಸಿ ಉಳಿದ ಕೆಲಸಗಳಾದ ಬಿ.ಡಿ.ಎ ರಸ್ತೆಗಳಲ್ಲಿ ಚರಂಡಿ ನಿರ್ಮಿಸುವ ಬಗ್ಗೆ ಹಾಗೂ ರೈಲ್ವೆಸೇತುವೆಯ ಹೆಚ್ಚುವರಿ ವೆಂಟನ್ನು ನಿರ್ಮಿಸಲು ಪ್ರಗತಿಯ ಬಗ್ಗೆ ಕೋರಿದ್ದು, ಮುಂದಿನ ಸಭೆಯಲ್ಲಿ ಈ ಕುರಿತು ತಿಳಿಸಲು ರಾಜಕಾಲುವೆ ವಿಭಾಗ ಹಾಗೂ ಬಿ.ಡಿ.ಎ ಇಂಜಿನಿಯರಿಂಗ್ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಲು ಕೋರಲಾಗುವುದು. ಎಂದು ಸಭೆಯಲ್ಲಿ ತಿಳಿಸಲಾಗಿದೆ.

**ಶ್ರೀ.ಪಿಳ್ಳಪ್ಪ ಬಾಲಾಜಿ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ಬಾಬುಸಾಪಾಳ್ಯ ಅಗರ ಮುಖ್ಯರಸ್ತೆಯಲ್ಲಿ ಬೃಹತ್ ರಸ್ತೆ ವಿಭಾಗದಿಂದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಮಾಡುತ್ತಿದ್ದು, ಕಲ್ವರ್ಟ್ ನಿರ್ಮಿಸಿ ಹಾಲಿ ಚರಂಡಿಯ ಮೇಲೆ ಸುಗಮವಾಗಿ ಸಂಚರಿಸಲು ಕವರಿಂಗ್ ಸ್ಲ್ಯಾಬ್ ಅಳವಡಿಸಲು ಹಾಗೂ ಬಾಲಾಜಿ ಬಡಾವಣೆಯ ಎಲ್ಲಾ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ರಿಸಿವಿಂಗ್ ಚೇಂಬರ್‌ಗಳನ್ನು ಅಳವಡಿಸಲು ಹಾಗೂ ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಿ ಇಲ್ಲಿ ಕಸ ಹಾಕುವವರಿಗೆ ದಂಡ ವಿಧಿಸುವ ಕ್ರಮ ವಹಿಸಲು ಆರೋಗ್ಯ ಶಾಖೆಯಿಂದ ಹೆಚ್ಚುವರಿ ಮಾರ್ಷಲ್‌ಗಳನ್ನು ನಿಯೋಜಿಸಿಕೊಳ್ಳಲು ಮಾನ್ಯ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಕೋರಿರುತ್ತಾರೆ.

**ಕ್ರಮ:-**ಬೃಹತ್ ರಸ್ತೆ ವಿಭಾಗದವರು ಕಲ್ವರ್ಟ್ ನಿರ್ಮಿಸಿ ಕವರಿಂಗ್ ಹಾಕುವ ಬಗ್ಗೆ ಕ್ರಮಕೈಗೊಳ್ಳಲು ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ರಿಸಿವಿಂಗ್ ಚೇಂಬರ್‌ಗಳನ್ನು ಅಳವಡಿಸಲು ಹಾಗೂ ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಿ ಇಲ್ಲಿ ಕಸ ಹಾಕುವವರಿಗೆ ದಂಡ ವಿಧಿಸುವ ಕ್ರಮ ವಹಿಸಲು ಆರೋಗ್ಯ ಶಾಖೆಯಿಂದ ಹೆಚ್ಚುವರಿ ಮಾರ್ಷಲ್‌ಗಳನ್ನು ನಿಯೋಜಿಸಿಕೊಳ್ಳಲು ಮಾನ್ಯ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ಸೂಚಿಸಲಾಯಿತು.

**ಶ್ರೀಮತಿ.ಸಿಂಧು ಜಾನ್ಸನ್ (ಕನಕಗಿರಿ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್):-** ಹೊರಮಾವು ಅಗರ/ಕಲ್ಕೆರೆ/ಬಂಜಾರ ಬಡಾವಣೆ ಮುಖ್ಯರಸ್ತೆಯು ತುಂಬಾ ಹಾಳಾಗಿದ್ದು, ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಈ ರಸ್ತೆಯನ್ನು ಕೂಡಲೇ ಅಭಿವೃದ್ಧಿ ಪಡಿಸಲು ಹಾಗೂ ಕೇಬಲ್ ಲಾಕ್ ಕುರಿತು ಪಿನ್ ಅಳವಡಿಸಲು ಕೋರಿರುತ್ತಾರೆ.

**ಕ್ರಮ:-** ಸದರಿ ರಸ್ತೆಯು ಬೃಹತ್ ರಸ್ತೆಗಳ ವಿಭಾಗದ ವ್ಯಾಪ್ತಿಗೆ ಬರುತ್ತಿದ್ದು, ಮುಂದಿನ ಸಭೆಯಲ್ಲಿ ಈ ರಸ್ತೆಯ ಕಾಮಗಾರಿಯ ಕುರಿತು ಸಭೆಗೆ ವರದಿ ಸಲ್ಲಿಸಲು ಬೃಹತ್ ರಸ್ತೆಗಳ ವಿಭಾಗ ರವರಿಗೆ ಹಾಗೂ ಕೇಬಲ್ ಲಾಕ್ ಪಿನ್ ಅಳವಡಿಸುವ ಬಗ್ಗೆ ಪಾಲಿಕೆಯ ವಿದ್ಯುತ್ ವಿಭಾಗ/ಬೆಸ್ಕಾಂ ವಿಭಾಗಕ್ಕೆ ಸಭೆಯು ಸೂಚಿಸಲಾಗಿದೆ.

Scanned by CamScanner

**ಶ್ರೀಮತಿ.ಸುಜಾತ ನಂದನಂ ಬಡಾವಣೆ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ಹೊರಮಾವು ಮುಖ್ಯರಸ್ತೆಯಲ್ಲಿ ರೈಲ್ವೇಹಳಿಯ ವರೆಗೆ ಒಳಚರಂಡಿ ಕೊಳವೆಸಾಲನ್ನು ಅಳವಡಿಸುವ ಕುರಿತು ಕೋರಿರುತ್ತಾರೆ.

**ಕ್ರಮ:-** ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಆರ್ಮುಗಂ ಹಾಗೂ ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ರವರು ಮಾತನಾಡಿ 5ನೇ ಬಿ.ಸಿ ಮುಖ್ಯರಸ್ತೆಯಲ್ಲಿ ಡಾಂಬರೀಕರಣ ಮಾಡಲು ಕೋರಿರುತ್ತಾರೆ.

**ಕ್ರಮ:-** ವಾರ್ಡ್ ಸಂಖ್ಯೆ 25 ರ ಕಿರಿಯ ಅಭಿಯಂತರರಿಗೆ ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

**ಶ್ರೀ.ನವೀನ್ Golden Forms ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ:-** ಸದರಿ ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.25, ರಲ್ಲಿ ಅಲ್ಲಲ್ಲಿ ನೀರು ನಿಲ್ಲುತ್ತಿದ್ದು, ಸೊಳ್ಳೆಗಳು ತೀವ್ರ ತರವಾಗಿದ್ದು, ಔಷಧಿ ಸಿಂಪಡಿಸಲು ಕೋರಿರುತ್ತಾರೆ.

**ಕ್ರಮ:-** ಸಂಬಂಧಿಸಿದ ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರುಗಳು ಕೂಡಲೇ ಈ ಕುರಿತು ಕ್ರಮವಹಿಸಲು ಸಭೆಯು ಸೂಚಿಸಿತು.

**ಬೃಂದಾವನ್ ಅವೆನ್ಯೂ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ ಮುಖ್ಯರಸ್ತೆ:-** ಸದರಿ ರವರು ಮಾತನಾಡಿ ಹಾಲಿ ರಾಜಕಾಲುವೆ ಸೇತುವೆಯನ್ನು ಎತ್ತರಮಾಡಿರುವುದಕ್ಕೆ ಧನ್ಯವಾದಗಳನ್ನು ತಿಳಿಸಿ ಕೆಲವು ರಸ್ತೆಗಳಲ್ಲಿ ಕೊಳವೆಸಾಲುಗಳ ಅಳವಡಿಸುವ ಕಾರ್ಯಗಳು ಅಪೂರ್ಣಗೊಂಡಿದ್ದು, ಅಳವಡಿಸಿದ ನಂತರ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಪಡಿಸಿಕೊಡಲು ಕೋರಿರುತ್ತಾರೆ.

**ಕ್ರಮ:-** ಅಪೂರ್ಣಗೊಂಡಿರುವ ಕೊಳವೆಸಾಲುಗಳನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಳವಡಿಸಲು ಕ್ರಮ ಕೈಗೊಳ್ಳಲು ಹಾಗೂ ಆದ್ಯತೆ ಮೇರೆಗೆ ರಸ್ತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಇಂಜಿನಿಯರಿಂಗ್ ವಿಭಾಗಕ್ಕೆ ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಂ.ಅ ಹೊರಮಾವು ರವರು ಪ್ರಥಮ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಹೊರಮಾವು ಉಪವಿಭಾಗ

Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 03/2020-21 ದಿನಾಂಕ: 09.11.2020

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:07/11/2020 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

ಉಪಸ್ಥಿತರು:

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀಮತಿ.ಜ್ಯೋತಿಲಕ್ಷ್ಮಿ | ಸ.ಕಂ.ಅ ಹೊರಮಾವು | 9108201798 |
| 2 | ಶ್ರೀ.ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು) | 9844587466 |
| 3 | ಶ್ರೀ.ರಮೇಶ್ | ಜೆ.ಇ ಹೊರಮಾವು ವಾರ್ಡ-25 | 9739838297 |
| 4 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 5 | ಶ್ರೀ.ತಿರುಮಲ ಪ್ರಸಾದ್ | BWSSB (PMC) | 9591646857 |
| 6 | ಶ್ರೀ.ವಿನೋದ್‌ಕುಮಾರ್ | ವಾರ್ಡ್ ನಂ.25 ಕಂದಾಯ ಪರಿವೀಕ್ಷಕರು | 9900116515 |
| 7 | ಶ್ರೀ.ಹರೀಶ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | - |
| 8 | ಶ್ರೀ.ಕೋದಂಡಪ್ಪ | ಬೀದಿದೀಪ | 9902031602 |
| | | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು. | |
| 8 | ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ | - | - |
| 9 | ಶ್ರೀ.ಪಿಳ್ಳಪ್ಪ ಬಾಲಾಜಿ ಬಡಾವಣೆ | - | - |
| 10 | ಶ್ರೀಮತಿ.ಸಿಂಧು ಜಾನ್ಸನ್ ಕನಕಗಿರಿ ಬಡಾವಣೆ | - | - |
| 11 | ಶ್ರೀಮತಿ.ಸುಜಾತ ನಂದನಂ ಬಡಾವಣೆ | - | - |
| 12 | ಶ್ರೀಮತಿ.ಸುಜಾತ ನಂದನಂ ಬಡಾವಣೆ | - | - |
| 13 | ಶ್ರೀ.ಆರ್ಮುಗಂ ಹಾಗೂ ದಾಮೋದರನ್ ಸರ್.ಎಂ.ವಿ ನಗರ | - | - |
| 14 | ಶ್ರೀ.ನವೀನ್ Golden Forms | - | - |
| 15 | ಬೃಂದಾವನ್ ಅವೆನ್ಯೂ ಬಡಾವಣೆ | - | - |

Scanned by CamScanner










Scanned by CamScanner